ಅದನ್ನು ಕೇಳುತ್ತ ಗೆಳತಿಯನ್ನು ನೆನೆಯುತ್ತ ಐವತ್ತು ವರ್ಷ ಹಿಂದೆ ಹೋಗಿದ್ದೆ ಎಂದರು. ಯಾರ ಯಾರ ನೆನಪಿನ ಭಿತ್ತಿಯಲ್ಲಿ ಯಾವ ಯಾವ ಹಾಡುಗಳು ಅಡಗಿವೆಯೋ? ಯಾವ ಯಾವ ಹಾಡಿನಲ್ಲಿ ಯಾರು ಯಾರು ಕಳೆದು ಹೋಗಿರುವರೋ ? ಯಾವ ಹಾಡುಗಳು ಯಾರನ್ನು ಸದಾ ಕಾಪಾಡುತ್ತದೆಯೋ, ಕಣ್ಣನ್ನು ಹನಿಸುತ್ತವೆಯೋ, ಜೀವ ಗುಟುಕನ್ನು ನೀಡುತ್ತವೆಯೋ, ಯಾರಿಗಾಗಿ ಯಾವ ಹಾಡು ಅರ್ಪಿತವೋ... ಹೇಳುವವರಾರು? 'ಏ ಮೇರೆ ವತನ್ ಕೆ ಲೋಗೋ' ಕೋಟ್ಯಂತರ ಜನರಲ್ಲಿ ಕಣ್ಣೀರು ತರಿಸಿದೆ. 'ಜಾನೆ ಕಹಾ ಗಯೇ ವೊ ದಿನ್' ಅದೆಷ್ಟು ಜನರ ವಿಷಾದವನ್ನು ನೇವರಿಸಿದೆಯೋ? 'ರಾಧಾ ಮಾಧವ ವಿನೋದ ಹಾಸ' ಒಂದು ತಲೆಮಾರಿನ ಪ್ರೇಮಿಗಳನ್ನು ಆಳಿತು. 'ನೀ ಬಂದು ನಿಂತಾಗ' ಇನ್ನೊಂದು ತಲೆಮಾರಿಗೆ ಸಂದಿತು. 'ಕೇಳದೆ ನಿಮಗೀಗ ದೂರದಲ್ಲಿ ಯಾರೋ...' ಯಾವ ತಲೆಮಾರಿನವರು ಕೇಳಿದರೂ ಯಾರನ್ನೋ ಹುಡುಕುವಂತೆ ಮಾಡುತ್ತದೆ. 'ಬೊಂಬೆ ಹೇಳುತೈತೆ' ಹೊಸ ಕಾಲದ ಹುಡುಗರ ಮನ ಗೆದ್ದಿತು. 'ಸ್ವಾಮಿ ದೇವನೆ ಲೋಕ ಪಾಲನೆ' ಶಾಲೆಗಳ ಪ್ರಾರ್ಥನಾಗೀತೆಯಾಯಿತು. 'ಮಾನವಾ ಮೂಳೆ ಮಾಂಸದ ತಡಿಕೆ' ಜನಮಾನಸದ ಫಿಲಾಸಫಿಯಾಯಿತು. 'ನಾನೆ ಎಂಬ ಭಾವ ನಾಶವಾಯಿತು...' ಜನರ ಅನುಭವ ವಾಣಿಯಾಯಿತು. 'ಆಗದು ಎಂದು ಕೈಕಟ್ಟಿ ಕುಳಿತರೆ' ಶ್ರಮಜೀವಿಗಳ ಗೀತೆಯಾಯಿತು. 'ಏನಾಗಲಿ ಮುಂದೆ ಸಾಗು ನೀ...' ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ಸೇರಿತು. 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಜನರ ಗೀತೆಯಾಯಿತು. ಕನ್ನಡಾಭಿಮಾನದ ಪ್ರತೀಕವಾಯಿತು. ಹಾಡಿಗೊಂದು ಕಥೆ, ಕಥೆಗೊಂದು ಜೀವ, ಜೀವಕ್ಕೊಂದು ಸಾಲು, ಸಾಲಿಗೊಂದು ನಾಸ್ಟಾಲ್ಜಿಯಾ... ಇದು ಮುಗಿಯದ ಚಿತ್ರಗೀತೆಗಳ ಪಯಣ.

ಇತ್ತೀಚೆಗೆ ಪೇಪರಲ್ಲಿ ಒಂದು ಸುದ್ದಿ ಬಂದಿತ್ತು. 'ಈ ಗಂಡ ನನಗೆ ಬೇಡ' ಎಂದು ಪೊಲೀಸ್ ಸ್ಟೇಷನ್‌ಗೆ ಹೋಗಿದ್ದ ಹೆಂಡತಿಯು ಯಾರು ಹೇಳಿದರೂ ತನ್ನ ಹಟ ಬಿಡಲಿಲ್ಲವಂತೆ. ಸ್ವತಃ ಗಂಡನೇ ಬಂದು ಗೋಗರೆದರೂ ಕೇಳಲಿಲ್ಲವಂತೆ. ಆ ಕ್ಷಣದಲ್ಲಿ ಆ ಮಹಾಶಯನಿಗೆ ಅದೇನು ಹೊಳೆಯಿತೋ, ಅವಳು ಇಷ್ಟ ಪಡುತ್ತಿದ್ದ ಚಿತ್ರಗೀತೆಯೊಂದನ್ನು ಎಲ್ಲರ ಸಮ್ಮುಖದಲ್ಲಿ ಭಾವಪೂರ್ಣವಾಗಿ ಹಾಡಲು ಶುರು ಮಾಡಿಕೊಂಡನಂತೆ. ಆ ಹಾಡು ಮುಗಿಯುವುದರೊಳಗಾಗಿ ಅವಳು ಕರಗಿ ನೀರಾಗಿ ಮತ್ತೆ ಗಂಡನ ಬಳಿ ಬಂದಳಂತೆ! ಅಂದ ಮೇಲೆ ಚಿತ್ರಗೀತೆಯ ಶಕ್ತಿಯನ್ನು ನಾವು ನೋಟಿನ ಹಾಗೆ ಅಮಾನ್ಯೀಕರಣ ಮಾಡಲಾಗದು. ಅಂದ ಹಾಗೆ ಅಂದು ಅವನು ತನ್ನ ಹೆಂಡತಿಯನ್ನು ಉಳಿಸಿಕೊಂಡ ಹಾಡು 'ಭಾಗ್ಯವಂತರು' ಚಿತ್ರದ 'ನಿನ್ನ ನನ್ನ ಮನವು ಸೇರಿತು, ನನ್ನ ನಿನ್ನ ಹೃದಯ ಹಾಡಿತು' ಆಗಿರಬಹುದೇ?

ಬೆನ್ನು ಬಾಗಿದ ತೊಂಬತ್ತರ ಹರೆಯದ ಅಜ್ಜಿ ನನಗೆ ನೀಡಿದ ಸಂದರ್ಶನದಲ್ಲಿ 'ಸೈಗಾಲ್ ಹಾಡುಗಳನ್ನು ಈಗಲೂ ನಾನು ಹಾಡಿಕೊಳ್ಳುವೆ. ಅವು ನನ್ನ ಉಲ್ಲಾಸದ ಕ್ಷಣಗಳು' ಎಂದು ಹಾಡಿ ತೋರಿಸಿದರು. ಎಪ್ಪತ್ತೆರಡು ವಯಸ್ಸಿನ ಗಮಕಿಯೊಬ್ಬರು ತಮ್ಮ ಸಂದರ್ಶನದ ಕೊನೆಯಲ್ಲಿ ತಾನೊಂದು ಚಿತ್ರಗೀತೆಯನ್ನು ಹಾಡಬೇಕೆಂದರು! 'ಓ ದುನಿಯಾ ಕೆ ರಖವಾಲೇ'ಯನ್ನು ಏರುಧ್ವನಿಯಲ್ಲಿ ಕಣ್ತುಂಬಿ, ಮೈತುಂಬಿ ಹಾಡಿದರು. ಗಮಕಕ್ಕಿಂತಲೂ ಅವರ ಸಂತೋಷದ ಪ್ರಮಾಣ ಅದರಲ್ಲಿಯೇ ಜಾಸ್ತಿಯಿದೆಯೆಂದೆನಿಸಿತು. ವೈಲಿನ್ ಮತ್ತು ಘಟಂಗಳ ಜೊತೆ ಯೇಸುದಾಸ್ ಬಿಬಿಸಿಯಲ್ಲಿ 'ಜಬ್ ದೀಪ್ ಜಲೇ ಆನಾ' ಹಾಡಿ ಅದಕ್ಕೂ ಜಾಗ ಮಾಡಿಕೊಟ್ಟರು. ಬಡೇ ಗುಲಾಂ ಅಲಿಖಾನ್ ಹಾಡಿದ ಠುಮ್ರಿ 'ಕ್ಯಾ ಕರು ಸಜನಾ' ಯೇಸುದಾಸ್ ಚಲನಚಿತ್ರಕ್ಕೆ ಹಾಡಿದ ಮೇಲೆ ಅದು ಮತಾಂತರಗೊಂಡು ವಿಪರೀತ